**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಪಿ.ಹೆಚ್. ಪೂಜಾರ್ ಇವರು ಜಮಖಂಡಿ ತಾಲ್ಲೂಕಿನ ಮರೆಗುದ್ದಿ, ಕೊಣ್ಣೂರ, ಹುಣಸಿಕಟ್ಟಿ, ಹುಲ್ಯಾಳ ಹಾಗೂ ಸಿದ್ದಾಪೂರ ಗ್ರಾಮಗಳು ನೀರಾವರಿಯಿಂದ ವಂಚಿತವಾಗಿದ್ದು, ಹತ್ತಿರದ ಕೃಷ್ಣಾ ನದಿಯಿಂದ ನೀರನ್ನು ಪಡೆಯಲು ಭಾರೀ ಒತ್ತಡವಿದೆ. ಸುಮಾರು 5028 ಎಕರೆ ಜಮೀನಿಗೆ ನೀರು, 4 ಕೆರೆಗಳು ಹಾಗೂ 31 ಚೆಕ್ ಡ್ಯಾಂ ಗಳನ್ನು ತುಂಬುವ ಮರೆಗುದ್ದಿ-ಗಲಗಲಿ ಏತ ನೀರಾವರಿ ಯೋಜನೆಗೆ ಹಿಂದಿನ ಸರ್ಕಾರ ಪ್ರಸ್ತಾವನೆ ತಂದು ಕಳೆದ ಭಾರಿಯ ಬಜೆಟ್‌ನಲ್ಲಿ 200 ಕೋಟಿ ರೂಗಳನ್ನು ಮೀಸಲಿಟ್ಟಿದೆ. ಕೃಷ್ಣಾ ನದಿಯಲ್ಲಿ ಗಲಗಲಿಯ ಬ್ಯಾರೇಜನ್ನು 2 ಮೀಟರ್ ಎತ್ತರಿಸಿ 1.22 ಟಿ.ಎಂ.ಸಿ ನೀರು ಹೆಚ್ಚು ಸಂಗ್ರಹವಾಗಿದ್ದು, ಇದರಲ್ಲಿ 0.5 ಟಿ.ಎಂ.ಸಿ ನೀರನ್ನು ಈ ಯೋಜನೆಗೆ ಕೊಟ್ಟು ಈ ಭಾಗದ ಜನರಿಗೆ ಶಾಶ್ವತ ನೀರಾವರಿ ವ್ಯವಸ್ಥೆ ಮಾಡಲು ಅಗತ್ಯವಿರುವ ಅನುದಾನ ಮಂಜೂರು ಮಾಡಿ, ತಕ್ಷಣ ಕಾರ್ಯಾರಂಭ ಮಾಡುವ ಬಗ್ಗೆ ನಿಯಮ 72 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಜಲಸಂಪನ್ಮೂಲ ಸಚಿವರ ಉತ್ತರ.**

ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಗಲಗಲಿ ಬ್ಯಾರೇಜ್‌ನ ಕೆಳಭಾಗದ ಗಲಗಲಿ ಗ್ರಾಮದ ಹತ್ತಿರ ಕೃಷ್ಣಾ ನದಿಯಿಂದ ನೀರನ್ನೆತ್ತಿ ಜಮಖಂಡಿ ಮತ್ತು ಮುಧೋಳ ತಾಲ್ಲೂಕಿನ 2035 ಹೆಕ್ಟೇರ್ (5028 ಎಕರೆ) ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಹಾಗೂ 4 ಕೆರೆ ಮತ್ತು 31 ಚೆಕ್ ಡ್ಯಾಂಗಳನ್ನು ತುಂಬಿಸಿ ಜನ ಜಾನುವಾರುಗಳಿಗೆ ಕುಡಿಯುವ ನೀರು ಒದಗಿಸಲು ಮತ್ತು ಅಂತರ್ಜಲ ಅಭಿವೃದ್ಧಿ ಪಡಿಸಲು ಮರೆಗುದ್ದಿ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಯೋಜಿಸಿದ್ದು, ಸದರಿ ಯೋಜನೆಗೆ 0.39 ಟಿ.ಎಂ.ಸಿ ನೀರಿನ ಅವಶ್ಯಕತೆ ಇರುತ್ತದೆ. (ನೀರಾವರಿಗಾಗಿ 0.27 ಟಿಎಂಸಿ ಮತ್ತು ಕೆರೆ ತುಂಬಿಸಲು 0.12 ಟಿಎಂಸಿ).

2018-19ನೇ ಸಾಲಿನ ಆಯವ್ಯಯದಲ್ಲಿ ಸದರಿ ಯೋಜನೆಯನ್ನು ರೂ.100.00 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಘೋಷಿಸಲಾಗಿದೆ. ಸದರಿ ಮರೆಗುದ್ದಿ ಯೋಜನೆಯನ್ನು ಜೂನ್‌ನಿಂದ ಅಕ್ಟೋಬರ್‌ವರೆಗೆ ಮುಂಗಾರು ಹಂಗಾಮಿನಲ್ಲಿ ಕೃಷ್ಣ ನದಿಯಿಂದ ನೀರನ್ನು ಎತ್ತಲು ಯೋಜಿಸಿದ್ದು, ಯೋಜನೆಯ ವಿವರವಾದ ವರದಿಯು ಪರಿಶೀಲನೆಯಲ್ಲಿದೆ.

ಬೇಸಿಗೆ ಕಾಲದಲ್ಲಿ ಜನ-ಜಾನುವಾರುಗಳಿಗೆ ಹಾಗೂ ಬಹು ಗ್ರಾಮಗಳ ಕುಡಿಯುವ ನೀರಿನ ಯೋಜನೆಗಳಿಗಾಗಿ ನೀರನ್ನು ಒದಗಿಸಲು ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಗಲಗಲಿ ಗ್ರಾಮದ ಹತ್ತಿರ ಬ್ಯಾರೇಜ್‌ನ ಎತ್ತರವನ್ನು ಹೆಚ್ಚಿಸಲಾಗಿದೆ. ಸದರಿ ಬ್ಯಾರೇಜಿನಿಂದ ಈಗಾಗಲೇ 7448 ಎಕರೆ ಜಮೀನಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ಈಗ ಪ್ರಸ್ತಾಪಿಸಿರುವ ಮರೆಗುದ್ದಿ ಯೋಜನೆಗೆ ಅವಶ್ಯವಿರುವ ನೀರು ಸದರಿ ಬ್ಯಾರೇಜಿನಿಂದ ಸಂಗ್ರಹವಾಗುವ ಅವಲಂಬನೆಯಾಗಿರುವುದಿಲ್ಲ.

**ಸಂಖ್ಯೆ: ಜಸಂಇ 23 ಡಬ್ಲ್ಯೂಎಲ್ಎ 2022**

**(ಗೋವಿಂದ ಎಂ. ಕಾರಜೋಳ)**
**ಜಲಸಂಪನ್ಮೂಲ ಸಚಿವರು**